ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಸ್ವಾಮಿ, ನನ್ನ ರೋಣ್ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ಮುಖ್ಯ ಅಧಿಕಾರಿಗಳು ಸುಮಾರು ೫-೬ ವರ್ಷದಿಂದಲೂ ಇಲ್ಲವೇ ಇಲ್ಲ. ಹೀಗಿರುವಾಗ ಅಲ್ಲಿ ಏನು ಅಭಿವೃದ್ಧಿಯನ್ನು ಮಾಡುತ್ತಿದ್ದೀರಿ ? ಇದನ್ನು ತಾವು ವಿಚಾರ ಮಾಡಬೇಕು. ೧೯೫೫-೫೯ರ ಸಾಲಿನಲ್ಲಿ ಫೌಪರ್ಸ್ ಟ್ರೈನಿಂಗ್ ಮತ್ತು ಕೋಕನಟ್ ವಿತ್ ಪಿ.ಡಿ.ಬಿ ಆಫಿಸ್ಟೆನ್ಸ್‌ಗೆ ನನ್ನ ತಾಲ್ಲೂಕಿಗಾಗಿ ಏನು ಹಣವನ್ನು ನೀಡಿದ್ದೀರಿ ಅದು ಫಲಪ್ರದವಾಗಿ ಖರ್ಚಾಗಿದೆಯೇ ? ಕೆಲಸ ಕಾರ್ಯಗಳು ಏನಾದರೂ ನಡೆದಿವೆಯೆ ? ಇದರ ಬಗ್ಗೆ ತಾವು ಏನಾದರೂ ಅಲ್ಲಿಂದ ಮಾಹಿತಿಯನ್ನು ತರಿಸಿಕೊಂಡಿದ್ದೀರಾ ?

೧೦.೦೦ ಎ.ಎಂ.

ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಮಟ್ಟಿಗೆ ಅಲ್ಲಿ ಯಾವ ಕೆಲಸವೂ ಸರಿಯಾಗಿ ನಡೆಯುತ್ತಿಲ್ಲ. ಏತಕ್ಕೆಂದರೆ ಅಲ್ಲಿ ತೋಟಗಾರಿಕೆ ಮುಖ್ಯ ಅಧಿಕಾರಿಗಳೇ ಇಲ್ಲ. ಈ ವಿಷಯವನ್ನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಎಲ್ಲಿ ಸಣ್ಣ ಪ್ರಮಾಣದ ನೀರು ಇದೆ ಅಲ್ಲಿ ಪ್ರತಿಯೊಬ್ಬ ರೈತರಿಗೂ ಸಣ್ಣ ಪ್ರಮಾಣದಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಬೇಕು ಎನ್ನುವ ಒಂದು ತಿಳುವಳಿಕೆಯನ್ನು ಕೊಡಬೇಕೆಂದು ಹೇಳಿದರೂ ಕೂಡ ಆ ಕೆಲಸವನ್ನು ತೋಟಗಾರಿಕೆಯ ಇಲಾಖೆಯವರು ಮಾಡುತ್ತಿಲ್ಲ. ಆದ್ದರಿಂದ ತೋಟಗಾರಿಕೆಯ ಅಧಿಕಾರಿಯನ್ನು ಅಲ್ಲಿಗೆ ಹಾಕುವುದಲ್ಲದೆ, ತಾವು ಎಲ್ಲಿ ಸಣ್ಣ ನೀರನ್ನು ಪಡೆಯುತಕ್ಕಂಥ ರೈತರು ಇರುತ್ತಾರೋ ಅವರಿಗೆ ನೀರು ಫಲಪ್ರದವಾಗಿ ಉಪಯೋಗಿಸಲು ಅನುಕೂಲವಾಗುವಂತೆ, ಅವರಿಗೆ ಗಿಡಗಳನ್ನು ಕೊಡಲು ಏನಾದರೂ ತೋಟಗಾರಿಕೆ ಇಲಾಖೆಯವರು ಪ್ರಯತ್ನ ಮಾಡುತ್ತಾರೆಯೇ ಹೇಗೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ, ಅಲ್ಲಿ ತಾಲ್ಲೂಕು ಮಟ್ಟದ ಉನ್ನತ ಅಧಿಕಾರಿಗಳು ಆರು ವರ್ಷಗಳಿಂದ ಇಲ್ಲವಿರುವುದು ನನ್ನ ಗಮನಕ್ಕೆ ಬಂದಿಲ್ಲ. ಅಲ್ಲಿ ಅಧಿಕಾರಿಗಳು ಇಲ್ಲವೆಂದು ತಿಳಿಸಿರುವುದರಿಂದ ಅಧಿಕಾರಿಗಳನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಹೋದ ವರ್ಷ ಸುಮಾರು ೧೮,೯೦೦ ರೂಪಾಯಿಗಳನ್ನು ೯ ಯೋಜನೆಗಳಿಗೆ ಖರ್ಚು ಮಾಡಿದ್ದೇವೆ. ಈ ವರ್ಷ ರೋಣ ತಾಲ್ಲೂಕಿಗೆ ಳಿಖಿ,೮೦೦ ರೂಪಾಯಿಗಳನ್ನು ಒದಗಿಸಲಾಗಿದೆ. ಆದ್ದರಿಂದ ಹೆಚ್ಚಿಗೆ ಹಣವನ್ನು ಖರ್ಚು ಮಾಡಿ ತೆಂಗಿನ ಬೆಳೆ ಮತ್ತು ಬೇರೆ ಬೇರೆ ಯಾವುದು ಸೂಕ್ತವಾದ ಬೆಳೆಯನ್ನು ಬೆಳೆಯಲು ಸಾಧ್ಯವೋ ಅವುಗಳನ್ನು ಆ ತಾಲ್ಲೂಕು ರೈತರಿಗೆ ಕೊಡಲು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತೇವೆ ಹಾಗೂ ಮಾನ್ಯ ಸದಸ್ಯರಲ್ಲೂ ಕೂಡ ಈ ಬಗ್ಗೆ ಚರ್ಚೆ ಮಾಡಿ ಅಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತಕ್ಷಣ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ತೋಟಗಾರಿಕೆ ಅಧಿಕಾರಿಯನ್ನು ಹಾಕಬೇಕೆಂದು ಎಲ್ಲ ಮಂತ್ರಿಗಳಿಗೂ ಹೇಳಿದ್ದೆ. ಎಲ್ಲಾ ಅಧಿಕಾರಿಗಳಿಗೂ ಹೇಳಿದ್ದೆ. ಅವರೂ ಕೂಡ ಇಷ್ಟೇ ಸುಂದರವಾದ ಉತ್ತರವನ್ನು ಕೊಟ್ಟಿದ್ದರು. ಆದರೂ ಯಾರನ್ನೂ ಇದುವರೆಗೆ ಹಾಕಲಿಲ್ಲ. ಇದು ಬಹುತೇಕ ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಹಿಂದಿನ ಸಚಿವರಿಗೂ ಮತ್ತು ಅಧಿಕಾರಿಗಳ ಗಮನಕ್ಕೂ ತಂದಿದ್ದೆ. ಅವರೂ ಕೂಡ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಮತ್ತೆ ಲಕ್ಷ ಒದಗಿಸಿದ್ದು ಇದೆ. ಆದರೆ ಉತ್ತರದಲ್ಲಿ ೧೮ ಸಾವಿರವೆಂದು ಹೇಳಿದ್ದೀರಿ, ಅಂದರೆ ಉತ್ತರದಲ್ಲಿ ಒಡಕಿದೆ ಎಂದು ಕಾಣಿಸುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮ್ಮ ತಾಲ್ಲೂಕು ಅಲೊಕೇಷನ್ ಮಾತ್ರ ಹೇಳಿದ್ದು. ಇಷ್ಟು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಇಡೀ ಸ್ಟೇಟ್ ಅಲೊಕೇಷನ್‌ಗೆ ಸಂಬಂಧಪಟ್ಟಂತೆ ಇರುತ್ತದೆ.

## ಸಂಯಂಕ್ತ ಕಿರಿಯ ಮಹಾ ವಿದ್ಯಾಲಯಗಳ ಶಿಕ್ಷಕರಿಗೆ ಡಿ.ಸಿ.ಆರ್.ಜಿ.ಯ ಪಾವತಿ

೯೨೦ (೨೫೮೨) ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸ್ವತಂತ್ರ ಪ್ರೌಢ ಶಾಲಾ ಶಿಕ್ಷಕರು ಸರ್ಕಾರಿ ಆದೇಶ ಸಂಖ್ಯೆ:ಇಡಿ ೧೫೫ ಎಸ್‌ಬಿಎ ದಿನಾಂಕ ೩೦-೫-೮೫ರ ಪ್ರಕಾರ ನಿವೃತ್ತಿ ಉಪದಾನವನ್ನು ೧-೪-೬೩ ರಿಂದ ಪಡೆಯುತ್ತಿದ್ದು, ಸಂಯುಕ್ತ ಕಿರಿಯ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗದ ಶಿಕ್ಷಕರು ಸರ್ಕಾರಿ ಆದೇಶ ಸಂಖ್ಯೆ/ಇಡಿ ೬೩ ಟಿಟಿಯು, ದಿನಾಂಕ ೨೨-೧೦-೨೭ರ ಪ್ರಕಾರ ೧-೪-೭೭ ರಿಂದ ಪಡೆಯುತ್ತಿರುವುದು ಸರ್ಕಾರಕ್ಕೆ ತಿಳಿದಿರುವುದೇ ?

ಆ) ಸ್ವತಂತ್ರ ಪ್ರೌಢಶಾಲಾ ವಿಭಾಗದ ಶಿಕ್ಷಕರು ಮತ್ತು ಸಂಯುಕ್ತ ಕಿರಿಯ ಕಾಲೇಜು ಶಿಕ್ಷಕರ ಹುದ್ದೆ ನೇಮಕಾತಿ ವೇತನಗಳಲ್ಲಿ ವ್ಯತ್ಯಾಸವಿದೆಯೇ ?

ಇ) ಸಂಯುಕ್ತ ಕಿರಿಯ ಕಾಲೇಜುಗಳಾಗಿ ವೀಲ್ಡ್‌ಜೆಗೆ ಏರಿಸುವ ಪೂರ್ವದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ನೇಮಕವಾಗಿರುವ ಶಿಕ್ಷಕರನ್ನೂ ಕಡೆಗಣಿಸಲು ಕಾರಣವೇನು ?

ಈ) ಸಂಯುಕ್ತ ಕಿರಿಯ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಿಕ್ಷಕರು ಸ್ವತಂತ್ರ ಪ್ರೌಢಶಾಲಾ ಶಿಕ್ಷಕರಿಗಿಂತ ಹೆಚ್ಚಿನ ಪ್ರಮಾಣದ ಆರ್ಥಿಕ ಸೌಲಭ್ಯವನ್ನು ಪಡೆಯುತ್ತಿದ್ದಾರೆಯೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಸ್ವತಂತ್ರ ಪ್ರೌಢಶಾಲಾ ಶಿಕ್ಷಕರು ಮತ್ತು ಸಂಯುಕ್ತ ಕಿರಿಯ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಶಿಕ್ಷಕರು ೧-೪-೬೩ ರಿಂದ ಅಥವಾ ಅವರು ಸೇವೆಗೆ ಸೇರಿದ ದಿನಾಂಕದಿಂದ ಅವರಲ್ಲಿ ಯಾವುದು ಕೊನೆಯೊಂದಿನಿಂದ ನಿವೃತ್ತಿ ಉಪದಾನ ಪಡೆಯುವರು.

ಆ) ಇಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

೯೨೦ (೨೫೮೨) ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಪರವಾಗಿ

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಸ್ವತಂತ್ರವಾಗಿರತಕ್ಕಂಥ ಅನೇಕ ಕಾಲೇಜುಗಳಲ್ಲಿ ಪ್ರೌಢಶಾಲೆಗಳಲ್ಲಿ ಹಾಗೂ ಸಂಯುಕ್ತ ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ಶಿಕ್ಷಕರುಗಳ ನೇಮಕಾತಿ ಮತ್ತು ವೇತನಗಳಲ್ಲಿ ವ್ಯತ್ಯಾಸವಿದೆ ಎಂದು ಕಂಡು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಸ್ವತಂತ್ರವಾಗಿರತಕ್ಕಂಥ ಪ್ರೌಢಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಸಹ ಶಿಕ್ಷಕರಿಗೂ ಸಂಯುಕ್ತ ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ಸಹ ಶಿಕ್ಷಕರಿಗೂ ಯಾವ ವಿಧವಾದ ವ್ಯತ್ಯಾಸವೂ ಇರುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್. - ಪ್ರಶ್ನೆ ೨೭೫೨ ದ್ಯಾವೀರಪ್ಪನವರ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧ ಪಟ್ಟದ್ದು. ಅದು ಇವತ್ತು ಬರುವುದಿಲ್ಲ. ಮಾಲೂರು ಪಟ್ಟಣದಲ್ಲಿರತಕ್ಕ ರಸ್ತೆಯ ಬಗ್ಗೆ ಕೇಳಿದ್ದಾರೆ. ಆದ್ದರಿಂದ ಅದನ್ನು ಆ ಖಾತೆಗೆ ವರ್ಗಾವಣೆ ಮಾಡಲಾಗಿದೆ.

ಶ್ರೀ ಹೆಚ್. ಬಿ. ದ್ಯಾವೀರಪ್ಪ.— ನಾನು ಮಾಲೂರು ಶ್ರೀರಾಮದೇವರ ದೇವಸ್ಥಾನದ ರಸ್ತೆಯ ಬಗ್ಗೆ ಕೇಳಿದ್ದೇನೆ. ಆದರೆ ಇಲ್ಲಿ ತಪ್ಪಾಗಿ ಆಗಿದೆ. ಇದು ತಮಗೆ ಸಂಬಂಧಪಟ್ಟದ್ದು. ದಯವಿಟ್ಟು ಉತ್ತರ ನೀಡಿ. ಅದು ಮಾಲೂರು ಪಟ್ಟಣದಲ್ಲಿರತಕ್ಕದ್ದು ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ಹಾಗಿದ್ದರೆ ಪೂರ್ಣ ವಿವರವನ್ನು ತರಿಸಿ ಒದಗಿಸಿ ಕೊಡುತ್ತೇನೆ. ಈಗ ನನ್ನ ಹತ್ತಿರ ಉತ್ತರ ಇಲ್ಲ.

## ಚಿಕ್ಕಾ ಮತ್ತು ವರಾಹಿ ಯೋಜನೆಗಳಲ್ಲಿ ಮುಳುಗಡೆಯಾದ ಜಮೀನು

೯೨೨ (೨೭೦೦) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ವಿದ್ಯುತ್ ರಾಜ್ಯ ಮಾನ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—